ಸಿ.ಸಿ..ನಂ.241-22

ಪಿ.ಡಬ್ಲ್ಯೂ-1

ದಿನಾಂಕ.16-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ಇವತ್ತು ಈ ಆರೋಪಿಯ ಮೇಲೆ 2 ಪ್ರಕರಣಗಳು ವಿಚಾರಣೆಗೆ ಇರುತ್ತದೆ ಎಂದರೆ ಸರಿ . ಎರಡು ಪ್ರಕರಣಗಳು ವಿಚಾರಣೆ ಇರುವುರಿಂದ 2 ಪ್ರಕರಣಗಳ ದಾಖಲಾತಿ ನೋಡಿಕೊಂಡು ಬಂದಿರುತ್ತೀರಿ ಎಂದರೆ ಸರಿ . ಈ ಪ್ರಕಣದಲ್ಲಿ ಇರುವ ಚೆಕ್ ಹಣ ರೂ 99,400/- ಅಗಿರುತ್ತದೆ . ಇನ್ನೊಂದು ಪ್ರಕರಣದ ದೃಡಿಕೃತ ನಕಲುಗಳನ್ನು ತೋರಿಸಿದರೆ ನಿಮಗೆ ಗುರುತಿಸಲು ಆಗುತ್ತದೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಗುರುತಿಸಿರುತ್ತಾರೆ. ಸದ್ರಿ ದಾಖಲಾತಿಗಳನ್ನು ನೋಡಿ ಗುರುತಿಸಿರುವುದರಿಂದ ಸಾಲದ ಅರ್ಜಿಯನ್ನು ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಒಟ್ಟಾರೆಯಾಗಿ ನಿಡಿ-1 ಎಂದು ಗುರುತಿಸಲಾಯಿತು ಹಾಗೂ ದೃಡಿಕೃತ ಚೆಕ ನ್ನುನಿಡಿ-2 ಎಂದು ಅದರೊಂದಿಗೆ ಇರುವ ಹಿಂಬಹರ ನಿಡಿ-3 ಎಂದು , ಬ್ಯಾಂಕಿನ ಮೆಮೊ ವನ್ನು ನಿಡಿ-4 ಎಂದುಗುರುತಿಸಲಾಯಿತು . ಈ ಪ್ರಕರಣದಲ್ಲಿ ಇರುವ ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸಿದಾಗ ಬ್ಯಾಂಕಿನ ಹಿಂಬರಹದಲ್ಲಿ ಖಾತೆಯನ್ನು ನಿರ್ಭಂಧಿಸಲಾಗಿದೆ ಎಂದು ಹಿಂಬರಹ ಬಂದಿದೆ. ಖಾತೆಯನ್ನು ನಿರ್ಬಂಧಿಸಲಾಗಿದೆ ಎಂದು ಯಾವ ಕಾರಣಕ್ಕೆ ಬಂದಿದೆ ಎಂದು ಬ್ಯಾಂಕಿನಲ್ಲಿ ವಿಚಾರಿಸಿರುತ್ತೇನೆ . ಬ್ಯಾಂಕಿನವರು ಅದಕ್ಕೆ ಸಂಬಂಧಿಸಿದತೆ ಮೆಮೊವನ್ನು ಕೊಟ್ಟಿರುತ್ತಾರೆ . ಬ್ಯಾಂಕಿಗೆ ಹೋಗಿ ನಿರ್ಭಂಧಿಸಿದ್ದಾರೆ ಎಂದು ಯಾವ ಕಾರಣಕ್ಕಾಗಿ ಬಂದಿರುತ್ತದೆ ಎಂದು ನೀವು ವಿಚಾರಣೆ ಮಾಡಿರುತ್ತೀರಾ ಎಂರದರೆ ಅಕೌಂಟ್ ಬ್ಲಾಕ ಎಂದು ಹೇಳಿರುತ್ತಾರೆ ಯಾವ ಕಾರಣಕ್ಕೆ ಅಕೌಂಟ ಬ್ಲಾಕ್ ಆಗಿರುತ್ತದೆ ಎಂದು ನೀವು ಕೇಳಿರುತ್ತೀರಾ ಎಂದರೆ ನಾನು ಕೇಳಿಲ್ಲ . ಸಾಲದ ಕಾಗದಗಳಿಗೆ ಹಾಗೂ ಚೆಕ್ ನ ಮೇಲೆ ಒಂದೇ ರೀತಿಯಾದ ಸಹಿ ಮಾಡಬೇಕು ಎಂದರೆ ಸರಿ. ಸದ್ರಿ 2 ಪ್ರಕರಣದ ದಾಖಲಾತಿಗಳಲ್ಲಿ ಆರೋಪಿಯ ಸಹಿಗಳಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಿರುತ್ತದೆಯಾ ಎಂದರೆ ಈ ಪ್ರಕರಣದಲ್ಲಿ ಕಂಡು ಬಂದಿಲ್ಲ . ಆ ಪ್ರಕರಣದ ದಾಖಲಾತಿಯ ಸಹಿಗಳನ್ನು ನೀವು ನೋಡಿರುತ್ತೀರಾ ಎಂದರೆ ನಾನು ಆ ಪ್ರಕಣದ ದಾಖಾಲತಿಗಳ ಸಹಿಗಳನ್ನು ನೋಡಿಲ್ಲ .

ಇನ್ನೊಂದು ಪ್ರಕರಣದ ಸಿಸಿ ಹೇಳಲಾಗುತ್ತದಾ ಎಂದರೆ ಇನ್ನೊಂದು ಪ್ರಕರಣದ ಸಿಸಿ ನಂಬರ ನನಗೆ ನೆನಪಿಲ್ಲ . ಆ ಪ್ರಕಣದ ಸಿ,ಸಿ ನಂ 81/2024 ಎಂದರೆ ಸರಿ . ಆ ಪ್ರಕರಣದಲ್ಲಿ ಸೂರ್ಯಾ ಸೊಸೈಟಿಯನ್ನು ಪ್ರತಿನಿಧಿಸಿ ನಾನೇ ಸಾಕ್ಯೆವನ್ನು ನುಡಿದಿರುತ್ತೇನೆ ಎಂದರೆ ಸರಿ . ಆ ಪ್ರಕರಣದಲ್ಲಿರುವ ಚೆಕ್ ನ್ನು ಚೆಕ್ ಮೇಲೆ ಇರುವ ಆರೋಪಿಯ ಸಹಿಯನ್ನು ನೋಡಿ ಗುರುತಿಸಿ ನೀವು ಆ ಪ್ರಕರಣಲ್ಲಿ ಸಾಕ್ಷ್ಯವನ್ನು ನುಡಿದಿರುತ್ತಿರಿ ಎಂದರೆ ಸರಿ . ಈ ಪ್ರಕರಣಲ್ಲಿರುವ ಆರೋಪಿಯ ಚೆಕ್ ನಲ್ಲಿ ಇರುವ ಆರೋಪಿ ಸಹಿ ನೋಡಿ ಗುರುತಿಸಿರುತ್ತೀರಿ ಎಂದರೆ ಸರಿ . ಈ ಪ್ರಕರಣದಲ್ಲಿರುವ ಆರೋಪಿಯ ಸಹಿಗೂ ಆ ಪರಕಣಲಿಲರುವ ಆರೊಪಿಯ ಸಹಿಗೂ ಏನಾದರೂ ವ್ಯತ್ಯಾಸ ಕಂಡು ಬಂದಿರುತ್ತದಾ ಎಂರೆ ಈ ಪ್ರಕರಣದಲ್ಲಿರುವ ಚೆಕ ನಲ್ಲಿರುವ ಸಹಿಯನ್ನು ನಾನು ನೋಡಿ ಕೊಂಡು ಬಂದಿರುತ್ತೇನೆ . ಇನ್ನೊಂದು ಪ್ರಕರಣಲ್ಲಿರುವ ಚೆಕ್ ನಲ್ಲಿರುವ ಸಹಿಯನ್ನು ನಾನು ಈ ದಿನ ನೋಡಿ ಕೊಂಡು ಬಂದಿಲ್ಲ . ನೀವು ಚೆಕ್ ನಲ್ಲಿ ಮತುತ ಸಾಲದ ದಾಖಲಾತಿಗಳಲ್ಲಿ ಆರೋಪಿಯ ಸಹಿಯನ್ನು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ .

2. ಸಾಲದ ಪ್ರಕಣದಲ್ಲಿ ರಿನಿವಲ್ ಇದ್ದರೆ ಯಾವ ರೀತಿಯ ಕ್ರಮ ಜರುಗಿಸುತ್ತೀರಿ ಎಂದರೆ ಹಿಂದಿನ ಲೋನ ಅಕೌಂಟ್ ನ್ನು ಕ್ಲೊಸ ಮಾಡಿ ಅವರ ಸಹಿ ಪಡೆದುಕೊಂಡು ಹಾಗೂ ಜಾಮಿನುದಾರರ ಸಹಿ ಪಡೆದುಕೊಂಡು ಪುನಃ ಲೋನ್ ವನ್ನು ರಿನಿವಲ್ ಮಾಡಿಕೊಡುತ್ತೇವೆ. ರಿನಿವಲ್ ಆಗುವ ಸಮಯದಲ್ಲಿ ಹಣದ ವ್ಯವಹಾರ ಆಗುತ್ತದೆಯಾ ಅಥವಾ ಬರಿ ಕಾಗದ ಪತ್ರಗಳು ಮಾತ್ರ ವ್ಯವಹಾರಕ್ಕೆ ಒಳಗಾಗುತ್ತದಾ ಎಂದರ ರಿನಿವಲ್ ಮಾಡಿದಾಗ ಸಾಲದ ಹಣವನ್ನು ಅವರ ಎಸ್ ಬಿ ಖಾತೆಗೆ ಹಾಕಿ ಆ ಹಣವನ್ನು ಹಿಂದಿನ ಖಾತೆಗೆ ಸಾಲವನ್ನು ತುಂಬಿಕೊಳ್ಳುತ್ತೇವೆ . ಆರೋಪಿಗೆ ಸೇರಿದ ಎಸ್ ಬಿ ಖಾತೆ ನಮ್ಮ ಬ್ಯಾಂಕ ನಲ್ಲಿ ಇರುತ್ತದೆ . ಆ ಎಸ್ ಬಿ ಖಾತೆಯಲ್ಲಿ ಹಣ ಜಮಾ ಆಗಿದ್ದು ಮತ್ತು ಬಡ್ಡಿ ಯಾಗಿದ್ದು ಎಲ್ಲಾ ಡಿಟೆಲ್ಸ ಬರುತ್ತದೆ ಎಂದರೆ ಸರಿ . ಸದ್ರಿ ಎಸ್ ಬಿ ಖಾತೆಯ ದಾಖಾಲತಿಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ . ಸಾಮಾನ್ಯವಾಗಿ ಸಾಲ ಮರು ಪಾವತಿ ಆಗದೆ ಇದ್ದಾಗ ABN ದಲ್ಲಿ ಪ್ರಕರಣ ದಾಖಲಿಸಿ ನಂತರ ಅಮಲ್ಜಾರಿ ಪ್ರಕರಣ ದಾಖಲಿಸುತ್ತೀರಿ ಎಂದರೆ ಸರಿ . ಈ ಪ್ರಕರಣಲ್ಲಿ ABN ಪ್ರಕರಣ ದಾಖಲಿಸಿದ್ದಾಗಲಿ ಅಥವಾ

ಅಮಲ್ಜಾರಿ ಪ್ರಕರಣ ದಾಖಲಿಸಿದ್ದಾಗಲಿ ಇಲ್ಲ . ಈ ಪ್ರಕರಣದಲ್ಲಿ ಸಾಲದ ದಾಖಲಾತಿಗಳನ್ನು ಚೆಕ್ ಗಳನ್ನು ಸೃಷ್ಟಿ ಮಾಡಿಕೊಂಡಿರುವುರಿಂದ ಈ ಪ್ರಕಣಕ್ಕೆ ABN ದಾಖಲಿಸಿಲ್ಲ ಎಂದರೆ ಸರಿಯಲ್ಲ

3. ಈ ಪ್ರಕರಣದಲ್ಲಿ ಜಾಮಿನುದಾರರಿಗೆ ಈ ಖಾತೆಗೆ ಸಂಭಂಧಿಸಿದಂತೆ ನೋಟಿಸನ್ನು ಕೊಟ್ಟದ್ದು ಇರುತ್ತದೆಯಾ ಎಂದರೆ ಸಾಲ ಬಾಕಿ ಇದ್ದಾಗ ಜಾಮಿನುದಾರರಿಗೆ ಸಹ ನೊಟಿಸು ಮಾಡಿದ್ದು ಇರುತ್ತದೆ . ನೋಟಿಸು ಮಾಡಿದ್ದು ಇದ್ದರೆ ಅದರ ಪ್ರತಿ ನಿಮ್ಮ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ . ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ . ಸಾಲದ ಅರ್ಜಿಯಲ್ಲಿ ING ಬಾಂಡ್ ಎಂದು ಕಾಣಿಸಿರುತ್ತೀರಿ ಅದು ಏನು ಎಂದರೆ ING ಬಾಂಡ್ ಎಂದರೆ insurance ಬಾಂಡ್ ತರಹ ಆಗಿರುತ್ತದೆ . ಅದು ಯಾವ ಸ್ವರೂಪದ insurance ಬಾಂಡ್ ಎಂದರೆ ನನಗೆ ನೆನಪಿಲ್ಲ . ಅದು ಯಾವ ಹೆಸರಿಗೆ ಇತ್ತು ಎಂದರೆ ಯಾರ ಹೆಸರಿಗೆ ಇತ್ತು ಎಂದು ನೆನಪಿಲ್ಲ . ಅದರಿಂದ ನಿಮಗೆ ಏನು ಉಪಯೋಗ ಎಂದರೆ ಅದನ್ನು ಸಾಲದ ಬದ್ರತೆಗಾಗಿ ಪಡೆದುಕೊಳ್ಳುತ್ತೇವೆ. ಸದ್ರಿ ಬಾಂಡ್ ನಮ್ಮ ಸಂಸ್ದೆ. ಯಲ್ಲಿ ಇರುತ್ತದೆ . ಅದನ್ನು ನನಗೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ . ಸಾಲವನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗಿರುತ್ತದೆ ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಯಲಿಲ್ಲ ಎಂದರೆ ವ್ಯವಹಾರಕ್ಕಾಗಿ ಎಂದು ಬರೆಯಲಾಗಿರುತ್ತದೆ. ಆರೋಪಿಗೆ ವ್ಯವಹಾರಕ್ಕಾಗಿ ಸಾಲ ವನ್ನು ಕೊಡಲಾಗಿರುತ್ತದಾ ಎಂದರೆ ಅದರಲ್ಲಿ ವ್ಯವಹಾರ ಎಂದು ಬರೆಯಲಾಗಿರುತ್ತದೆ . ಹಾಗಾಗಿ ವ್ಯವಹಾರಕ್ಕಾಗಿ ಕೊಡಲಾಗಿರುತ್ತದೆ . ವ್ಯವಹಾರಕ್ಕಾಗಿ ಸಾಲ ಕೊಟ್ಟಾಗ ಸಾಲವನ್ನು ರಿನಿವಲ್ ಮಾಡಿ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ . ಸದಿರ ಸಾಲ ರಿನಿವಲ್ ಸಾಲ ಆಗಿರುತ್ತದೆ . ರಿನಿವಲ್ ಮಾಡಬೇಕಾದರೆ ಈ ಸಾಲಕ್ಕಿಂತ ಮುಂಚೆ ನಿಮ್ಮ ಸೊಸೈಟಿಯಲ್ಲಿ ಇನ್ನೊಂದು ಸಾಲ ಇರಬೇಕು ಎಂದರೆ ಸರಿ . ಆ ಸಾಲ ಯಾವಾಗ ಎಷ್ಟು ಹಣಕ್ಕೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ . ಆ ಸಾಲದ ದಾಖಲಾತಿಗಳು ಈ ಸಾಲದ ದಾಖಲಾತಿ ಜೊತೆಗೆ ಇರಬೇಕು ಎಂದರೆ ರಿನಿವಲ್ ಆದ ಮೇಲೆ ಹಳೆಯ ಸಾಲ ಕ್ಲೊಸ ಆಗಿ ಹೊಸ ಸಾಲದ ಅರ್ಜಿ ತೆಗೆದುಕೊಳ್ಳಲಾಗುತ್ತದೆ . ಹಿಂದಿನ ಸಾಲ ಇದ್ದರೆ ಆ ಸಾಲದ ಬಗ್ಗೆ ಸಾಲದ ಅರ್ಜಿಯಲ್ಲಿ ಎಷ್ಟು ಸಾಲ ಪಡೆದಿದ್ದರು ಎಷ್ಟು ಹಣ ಕೊಟ್ಟು ಕ್ಲೊಸ ಮಾಡಿಕೊಳ್ಳಲಾಗಿದೆ ಎಂದು ಕಾಣಿಸಬೇಕಾಗುತ್ತದೆ ಎಂದರೆ ಸಾಲದ ಅರ್ಜಿಯಲ್ಲಿ ಆ ರೀತಿಯಾಗಿ ಕಾಣಿಸಬೇಕಾಗಿಲ್ಲ . ರಿನಿವಲ್ ಸಾಲದ ಅರ್ಜಿ ಕೊಡುವಾಗ ಹಳೆಯ ಸಾಲ

ಚುಕ್ತಾ ಆಗಿರುವುದಿಲ್ಲ ಎಂದರೆ ಸರಿ . ರಿನಿವಲ್ ಸಾಲ ಮಂಜೂರು ಆದ ಮೇಲೆ ಹಳೆಯ ಸಾಲ ಚುಕ್ತಾ ಆಗುತ್ತದೆ ಎಂದರೆ ಸರಿ. ಈ ಸಾಲಕ್ಕೆ ಜಾಮಿನುದಾರರು ಮಂಗಳಾ ಗಾಂವಕಾರ ಮತುತ ಸಂತೋಷ ನಾಯ್ಕ ಆಗಿರುತ್ತಾರೆ . ಸದ್ರಿ ಜಾಮಿನುದಾರರ ಯಾವುದಾದರೂ ದಾಖಲಾತಿಗಳನ್ನು ನೀವು ಪಡೆದುಕೊಂಡಿರುತ್ತೀರಾ ಎಂರೆ ಜಾಮಿನುದಾರರ ಸಹಿ ಪಡೆದುಕೊಂಡಿರುತ್ತೇನೆ ದಾಖಲಾತಿ ಪಡೆದುಕೊಂಡಿಲ್ಲ . ಆರೋಪಿಗೆ ಆದಾಯ ಮತುತ ಆಸ್ತಿ ಇರುತ್ತದೆ ಎಂದು ದಾಖಲಾತಿಗಳನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ . ಆದರೆ ಅರೋಪಿಗೆ ಆಸ್ತಿ ಮನೆ ಎಲ್ಲಾ ಇರುತ್ತದೆ . ಸಾಲದ ಅರ್ಜಿ ಸಲ್ಲಿಸಿದ ಮೇಲೆ ವ್ಯವಸ್ಥಾಪಕರು ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದರೆ ಸರಿ . ಸಾಲದ ಅರ್ಜಿಯಲ್ಲಿ ಕಾಣಿಸಿದಂತೆ ಆ ರೂ 2 , 30,000/- ಅದಾಯ ಇದ್ದಬಗ್ಗೆ ಯಾವುದಾದರೂ ದಾಖಲಾತಿ ಪರಿಶೀಲನೆ ಮಾಡಿರುತಿತರಾ ಎಂರೆ ಅವರನ್ನು ವಿಚಾರಣೆ ಮಾಡಿದಾಗ ಅವರು ರುರಾ 2,30,000/- ಆದಾಯ ಇರುತ್ತದೆ ಎಂದು

ಹೇಳಿರುತ್ತಾರೆ ಅದರಂತೆ ಬರೆಯಲಾಗಿರುತ್ತದೆ . ಸಾಲದ ಅರ್ಜಿಯಲ್ಲಿ ಆಸ್ತಿಗಳ ವಿವರಣೆಯನ್ನು ಅದರ ಸರ್ವೆ ನಂಬರ ವನ್ನು ಬರೆಯುವ ಕ್ರಮ ಇರುತ್ತದೆ ಎಂದರೆ ಸಾಲದ ಬದ್ರತೆಗಾಗಿ ಆಸ್ತಿ ನೀಡಿದ್ದರೆ ಅದರ ಸರ್ವೆ ನಂಬರ ಅಲ್ಲಿ ಬರೆಯಬಹುದು. ಜಾಮಿನುದಾರರ ಸಹಿಗಳನ್ನು ಸಹ ನೀವು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರ ಸರಿಯಲ್ಲ . ಸಾಲದ ನೀಡುವ ಸಮಯದಲ್ಲಿ ಸಾಲಗಾರರಿಗೆ ಮತ್ತು ಜಾಮಿನುದಾರರಿಗೆ ಇಷ್ಟು ವಯಸ್ಸು ಇರಬೇಕು ಎಂದು ವಯೋಮಿತಿ ಇರುತ್ತದಾ ಎಂದರೆ ಹಾಗೆನಿಲ್ಲ . ಗರಿಷ್ಟ ವಯೋಮಿತಿ ಅಂದರೆ 70 ವಯಸ್ಸಿನವರು ಬಂದರೆ ಸಾಲವನ್ನು ಕೊಡುತ್ತೀರಾ ಎಂದರೆ ಆದಾಯ ನೋಡಿ ಸಾಲ ಕೊಡುತ್ತೇವೆ .

4. ಸಾಲದ ಅರ್ಜಿಯಲ್ಲಿ ಇರುವ ಮಜಕೂರವನ್ನು ನಮ್ಮ ಸೊಸೈಟಿ ಯವರು ಬರೆದಿರುತ್ತಾರೆ . ಆರೋಪಿಗೆ 2017 ನೇ ಸಾಲಿನಲ್ಲಿ 40 ವರ್ಷ ವಯಸ್ಸು ಆಗಿತ್ತು ಎಂದುಯಾರು ಬರೆದರು ಎಂದರೆ ಅವರು 40 ವರ್ಷ ವಯಸ್ಸು ಆಗಿರುತ್ತದೆ ಎಂದು ಹೇಳಿರುತ್ತಾರೆ ಅದನು ಬರೆಯಲಾಗಿರುತ್ತದೆ . ಸಾಲದ ಕರಾರು ಪತ್ರದಲ್ಲಿ ಸಾಲದ ಸ್ಚರೂಪವನ್ನು ಸಹ ವಿವರವಾಗಿ ಬರೆಯಬೇಕು ಎಂದರೆ ಸರಿ . ಈ ಪ್ರಕರಣದಲ್ಲಿ ಸಾಲದ ಸ್ವರೂಪವನ್ನು ಸ್ಪಷ್ಟವಾಗಿ ಬರೆಯಲಿಲ್ಲ ಎಂದರೆ ಸರಿಯಲ್ಲ . ಯಾವ ಸಾಲ ಅದನ್ನು ಬಿಟ್ಟು ಉಳಿದ್ದನ್ನೆಲಾ ಹೊಡೆದುಹಾಬೇಕು ಎಂದರೆ ಈ ಸಾಲದ ಅರ್ಜಿ ಮತ್ತು ಸಾಲದ ಕರಾರುಪತ್ರ ಎಲ್ಲಾ ಕ್ಯಾಶ ಕ್ರೆಡಟ್ ಲೋನ್

ಗೆ ಸಂಬಂಧಿಸಿದ್ದು ಆಗಿರುತ್ತದೆ . ನೀವು ಅವರಿಗೆ ಕ್ಯಾಶ್ ಕ್ರೆಡಿಟಿ ಸ್ವರೂಪದ ಸಾಲವನ್ನು ಅವರಿಗೆ ಕೊಡದೆ ಇರುವುದರಿಂದ ಅದನ್ನು ಸದ್ರಿ ಕರಾರು ಪತ್ರದಲ್ಲಿ ನಮೂದಿಸಿಲ್ಲ ಎಂರೆ ಸರಿಯಲ್ಲ . ನಿಪಿ–8 ರಲ್ಲಿ ನಮೂದಿಸಿದ ಬಡ್ಡಿ ಹಣ ಅಸಲಿಗೆ ಸೇರಿಸಿಕೊಂಡು ಲೆಕ್ಕಾಚಾರ ಮಾಡಿರುತ್ತಿರೊ ಇಲ್ಲವೊ ಎಂದರೆ ಅಸಲು ಎಷ್ಟಿರುತ್ತದೆಯೋ ಅಷ್ಟಕ್ಕೆ ಬಡ್ಡಿ ಲೆಕ್ಕಾಚಾರ ಮಾಡಲಾಗಿರುತ್ತದೆ . ನಿಪಿ–8 ರಲ್ಲಿರುವ ಅಸಲು ಮತ್ತು ಬಡ್ಡಿ ಸೇರಿಸಿದರೆ ನೀವು ಹೇಳಿದ ಮೊತ್ತವು ಚೆಕ್ ನಲ್ಲಿ ನಮೂದಿಸಿದ ದಿನಾಂಕದಂದು ಅಷ್ಟು ಹಣ ಬರುತ್ತದೆಯಾ ಎಂದರೆ ಹೌದು .

5. ಸಾಲದ ರಿನಿವಲ್ ಮಾಡುವ ಸಮಯದಲ್ಲಿ ಸದಸ್ಯತ್ವ ಬದಲಾಗುತ್ತದಾ ಎಂದರೆ ಇಲ್ಲ . ಎಲ್ಲಾ ಶಾಖೆಯಲ್ಲಿ ಬೇರೆ ಬೇರೆ ಸದಸ್ಯತ್ವ ದ ಸಂಖ್ಯೆ ಬರುತ್ತದೆಯಾ ಅಥವಾ ಪ್ರಧಾನ ಕಚೆರಿಯಿಂದ ಒಂದೆ ಸಂಖ್ಯೆ ಬರುತ್ತದೆಯಾ ಎಂದರೆ ಎಲ್ಲಾ ಶಾಖೆಯಸದಸ್ಯರಿಗೆ ಒಂದೆ ಸದಸ್ಯತ್ವ ಕೊಡಲಾಗುತ್ತದೆ . ಒಬ್ಬರಿಗೆ ಒಂದು ಸದಸ್ಯತ್ವ ಸಂಖ್ಯೆ ಕೊಟ್ಟರೆ ಅದೇ ಸದಸ್ಯತ್ವ ಇರುತ್ತದೆ ಎಂದರೆ ಸರಿ . ಸಾಲದ ಅರ್ಜಿಯಲ್ಲಿರುವ Sl. No. 5 ರಲ್ಲಿ ಯಾವ ಉತ್ಪನ್ನಗಳ ಮೂಲದಿಂದ ಸಾಲದ ಮರು ಪಾವತಿಯನ್ನು ಮಾಡಲಾಗುವುದು ಎಂದರೆ ಅಲ್ಲಿ ಅರ್ಜಿದಾರರ ಉತ್ಪನ್ನ ಯಾವುದು ಎಂದು ಬರೆಯಬೇಕು ಎಂದರೆ ಸಾಲದ ಅರ್ಜಿಯಲ್ಲಿ ಅತನು ವ್ಯವಹಾರ ಮಾಡುತ್ತಾನೆ ಎಂದು ಕಾಣಿಸಲಾಗಿರುತ್ತದೆ ಹಾಗಾಗಿ ವ್ಯವಹಾರದ ಮೂಲಗಳಿಂದ ಉತ್ಪನ್ನ ಬರುತ್ತದೆ ಎಂದು ತೆಗೆದುಕೊಳ್ಳಬಹುದು .

6. ಆರೋಪಿಗೆ ಅಥವಾ ಜಾಮಿನೂದಾರರಿಗೆ ಸಬಂಧಿಸಿದಂತೆ ಎಪಡಿ ಇರುತ್ತದೆಯಾ ಎಂರದೆ ನನಗೆ ನೆನಪಿಲ್ಲ. ನೀವು ಪ್ರಕರಣಲ್ಲಿರುವ ಹಣವನ್ನು ಆರೋಪಿಗೆ ಸಾಲವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಆರೋಪಿಯು ಕೊಟ್ಟ ಸಾಲದ ಹಣದ ಮರುಪಾವತಿಗಾಗಿ ಚೆಕ್ ನ್ನು ಕೊಟ್ಟದ್ದು ಇಲ್ಲ ಎಂರದೆ ಸರಿಯಲ್ಲ . ನೀವು ಕೊಟ್ಟಿರುವ ಲೀಗಲ್ ನೋಟಿಸು ಆರೋಪಿಗೆ ಜಾರಿ ಆಗಿಲ್ಲ ಎಂದರೆ ಸರಿಯಲ್ಲ . ನಿಪಿ–5 ರಲ್ಲಿರುವ ಸಹಿಗೂ ನಿಪಿ–1 ರಲ್ಲಿರುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸ್ವಲ್ಪ ವ್ಯತ್ಯಾಸ ಇರುತ್ತದೆ . ನಿಪಿ–1 ರಲ್ಲರುವ ಚೆಕ್ ವನ್ನು ಯಾುರು ಬರೆದು ತಂದುಕೊಟ್ಟಿರುತ್ತಾರೆ ಎಂದರೆ ಆರೋಪಿ ಬರೆದು ತಂದು ಕೊಟ್ಟಿರುತ್ತಾರೆ . ಆರೋಪಿಗೆ ಇಷ್ಟು ಹಣ ಬಾಕಿ ಇರುತ್ತದೆ ಎಂದು ಹೇಳಿದಾಗ ಅವರೆ ಆ ಹಣವನ್ನು ಹೊರಗಡೆಯಿಂದ ಬರೆದು

ಸಹಿ ಹಾಕಿ ತಂದು ಕೊಟ್ಟಿರುತ್ತಾರೆ . ಈ ರೀತಿ ಚೆಕ್ ನ್ನು ಬರೆದುಕೊಟ್ಟದ್ದು ಇಲ್ಲ ಮತ್ತು ಅದರಲ್ಲಿರುವ ಸಹಿ ಆರೋಪಿಯದ್ದು ಅಲ್ಲ . ಸಾಲದ ಅರ್ಜಿಯಲ್ಲಿರುವ ಸಹಿ ಕೂಡ ಆರೋಪಿಯದ್ದು ಅಲ್ಲ ಎಂದರೆ ಸರಿಯಿಲ್ಲ . ಸಂಪೂರ್ಣ ದಾಖಲಾತಿಗಳನ್ನು ಸೃಷ್ಟಿ ಮಾಡಿ ಕೊಂಡು ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ . ಸುಳ್ಳು ಪ್ರಕರಣಕ್ಕೆ ಪೂರಕರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.